# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1296
ಸದಸ್ಯರ ಹೆಸರು : ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ (ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ : 29.12.2022.
ಉತ್ತರಿಸುವವರು : ಮಾನ್ಯ ಮುಖ್ಯಮಂತ್ರಿಯವರು.

| ಕ್ರ.ಸಂ | ಪ್ರಶ್ನೆ | ಉತ್ತರ |
| --- | --- | --- |
| (ಅ) | ಉಡುಪಿ ಜಿಲ್ಲೆಯ, ಕಾಪು ತಾಲ್ಲೂಕಿನ ಮಜೂರು ಗ್ರಾಮ ಪಂಚಾಯತ್ ವ್ಯಾಪ್ತಿಯ ಪಾದೂರು ಗ್ರಾಮದಲ್ಲಿ ಕಾರ್ಯನಿರ್ವಹಿಸುತ್ತಿರುವ ISPRL (Indian Strategic Petroleum Reserve Limited) 2015 ರಿಂದ ಗ್ರಾಮ ಪಂಚಾಯತ್‌ಗೆ ಆಸ್ತಿ ಮತ್ತು ಕಟ್ಟಡ ತೆರಿಗೆ ಪಾವತಿಸದೆ ಬಾಕಿ ಉಳಿಸಿಕೊಂಡಿರುವುದರಿಂದ, ಗ್ರಾಮ ಪಂಚಾಯತ್‌ಗೆ ಆದಾಯದ ಕೊರತೆ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| (ಆ) | ಬಂದಿದ್ದಲ್ಲಿ, ಬಾಕಿ ಇರುವ ಆಸ್ತಿ ಮತ್ತು ಕಟ್ಟಡ ತೆರಿಗೆ ವಸೂಲಿಗೆ ಇದುವರೆಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; | ಉಡುಪಿ ಜಿಲ್ಲೆಯ, ಕಾಪು ತಾಲ್ಲೂಕಿನ ಮಜೂರು ಗ್ರಾಮ ಪಂಚಾಯತ್ ಪಾದೂರು ಗ್ರಾಮದಲ್ಲಿ ಕಾರ್ಯನಿರ್ವಹಿಸುತ್ತಿರುವ ISPRL (Indian Strategic Petroleum Reserve Limited) ಸಂಸ್ಥೆಯಿಂದ 2016 ನೇ ಸಾಲಿನಿಂದ ಈವರೆಗೆ ಆಸ್ತಿ ತೆರಿಗೆಯಾಗಿ ರೂ.37,42,17,898.00 ಮೊತ್ತ ಗ್ರಾಮ ಪಂಚಾಯತಿಗೆ ಪಾವತಿಸಲು ಬಾಕಿ ಇರುತ್ತದೆ.<br>ಆಸ್ತಿ ತೆರಿಗೆ ಪಾವತಿ ಬಗ್ಗೆ ಮಜೂರು ಗ್ರಾಮ ಪಂಚಾಯತ್‌ನಿಂದ ಡಿಮ್ಯಾಂಡ್ ನೋಟೀಸನ್ನು ನೀಡಲಾಗಿದೆ. |
| (ಇ) | ಯಾವ ಕಾಲಮಿತಿಯೊಳಗೆ ಬಾಕಿ ಇರುವ ಆಸ್ತಿ ಮತ್ತು ಕಟ್ಟಡ ತೆರಿಗೆಯನ್ನು ವಸೂಲಿ ಮಾಡಿ ಗ್ರಾಮ ಪಂಚಾಯತಿ ಅಭಿವೃದ್ಧಿಗೆ ಬಳಸಲಾಗುವುದು; | ಬಾಕಿ ಇರುವ ಆಸ್ತಿ ತೆರಿಗೆ ವಸೂಲಾತಿಗೆ ನೀಡಲಾಗಿರುವ ಡಿಮ್ಯಾಂಡ್ ನೋಟೀಸು ವಿರುದ್ಧ ISPRL ಸಂಸ್ಥೆಯವರು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ 21598/2022 (LB-RES) ರಂತೆ ದಾವೆ ಸಲ್ಲಿಸಿದ್ದು, ಮಾನ್ಯ ನ್ಯಾಯಾಲಯದ ಅಂತಿಮ ಆದೇಶದಂತೆ ಕ್ರಮ ಕೈಗೊಳ್ಳಲಾಗುತ್ತದೆ. |
| (ಈ) | ಇದುವರೆಗೆ ಸದರಿ ಸಂಸ್ಥೆಯ ಎಷ್ಟು ಮೊತ್ತದ ಸಿಎಸ್‌ಆರ್ ಅನುದಾನವನ್ನು ಗ್ರಾಮ ಪಂಚಾಯತಿ ಅಭಿವೃದ್ಧಿಗೆ ವಿನಿಯೋಗಿಸಲಾಗಿದೆ? | 2012 ನೇ ಸಾಲಿನಲ್ಲಿ ಇಂಜಿನಿಯರ್ಸ್ ಇಂಡಿಯಾ ಲಿಮಿಟೆಡ್ (EIL) ಇವರ ವತಿಯಿಂದ ಮಜೂರು ಗ್ರಾಮ ಪಂಚಾಯತ್ ಕಟ್ಟಡವನ್ನು ರೂ.150.00 ಲಕ್ಷ ಮೊತ್ತದಲ್ಲಿ ನಿರ್ಮಿಸಲಾಗಿರುತ್ತದೆ. ISPRL ಸಂಸ್ಥೆಯ ಹೆಸರಿನಲ್ಲಿ ಮಜೂರು ಗ್ರಾಮ ಪಂಚಾಯತಿಗೆ ಸಿ.ಎಸ್.ಆರ್. ಅನುದಾನ ಬಿಡುಗಡೆಯಾಗಿರುವುದಿಲ್ಲ. ಕಾಮಗಾರಿ ಅನುಷ್ಠಾನದ ಬೇಡಿಕೆಯ ಪಟ್ಟಿಯನ್ನು ಗ್ರಾಮ ಪಂಚಾಯತ್‌ನಿಂದ ಆಗ್ಗಿಂದಾಗ್ಗೆ ಸಂಸ್ಥೆಗೆ ನೀಡಲಾಗುತ್ತಿದೆ. |

ಸಂ. ಗ್ರಾಅಪ 386 ಗ್ರಾಪಂಅ 2022

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ